ದಿ: 27.06.2025

**ಓ.ಎಸ್.ನಂ :207-2023**

ಪಿ.ಡಬ್ಲ್ಯು.1

ದಿ. 27.06.2025 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು 1 ಮತ್ತು 2 ನೇ ಪ್ರತಿವಾದಿ ಯರ ಪರ : ಶ್ರೀ ಡಿ.ಜೆ ವಕೀಲರಿಂದ**

1. ಈ ಕೇಸಿನ ಸಂಪೂರ್ಣ ಮಾಹಿತಿ ನನಗೆ ಗೊತ್ತಿದೆ. ದಾವಾ ಸ್ವತ್ತು ನಮಗೆ ನಮ್ಮ ಅಜ್ಜಿ ಅಜ್ಜರಿಂದ ಬಂದಿರುತ್ತದೆ. ಅದು ನಮ್ಮ ಅಜ್ಜಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಯಾವ ಸಾಲಿನಲ್ಲಿ ನಮ್ಮ ಅಜ್ಜಿಗೆ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಸರ್ಕಾರದಿಂದ ಬಂದ ದಾವಾ ಸ್ವತ್ತು ನನ್ನ ಅಜ್ಜಿಯ ಮತ್ತು ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ನನ್ನ ಅಜ್ಜಿ ಕೇಶಲಿಬಾಯಿ ರವರಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ಕೇಶಲಿಬಾಯಿ ರವರ ಹೆಸರಿನಲ್ಲಿ ಇದ್ದ ಸ್ವತ್ತು ಅವರ ಮರಣದ ನಂತರ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯ ಹೆಸರಿನಲ್ಲಿ ಪೌತಿ ಖಾತೆಯಡಿಯಲ್ಲಿ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಪೌತಿ ಖಾತೆಯಡಿಯಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಬಂದಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನನ್ನ ಅಜ್ಜನ ಮರಣದ ನಂತರ ದಾವಾ ಸ್ವತ್ತು ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿ ಪೌತಿ ಖಾತೆಯಲ್ಲಿ ಬಂದಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಸ್ವತ್ತು ಯಾವಾಗ ವರ್ಗಾವಣೆಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆಗ ನಾನು ಇನ್ನು ಹುಟ್ಟಿರಲಿಲ್ಲ ಎಂದರೆ ಸರಿ. ನನ್ನ ತಂದೆ ನಾನು ಚಿಕ್ಕವನಿರುವಾಗಲೇ ಮೃತಪಟ್ಟಿರುತ್ತಾರೆ.

2. ನನ್ನ ಚಿಕ್ಕಪ್ಪ 5 ನೇ ವಾದಿ ಈಗಲೂ ಸಹಾ ಕಲ್ಲವ್ವನಾಗತೀಹಳ್ಳಿಯಲ್ಲಿ

ವಾಸವಾಗಿದ್ದಾನೆ ಎಂದರೆ ಸರಿ. ಅವರಿಗೆ ಉಮೇಶ ಎಂಬ ಮಗನಿದ್ದಾನೆ ಎಂದರೆ ಸರಿ. ಸದರಿ ಉಮೇಶ ರವರೇ ಎಲ್ಲಾ ದಾಖಲೆಗಳನ್ನು ಹುಡುಕಿ ಈ ಕೇಸನ್ನು ದಾಖಲಿಸಲು ತಿಳಿಸಿರುತ್ತಾನೆ ಎಂದರೆ ಸರಿ. ಈ ದಾವೆ ದಾಖಲಿಸುವಾಗ ನನ ಚಿಕ್ಕಪ್ಪ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ಅವರು ಈಗಲೂ ಸಹಾ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ. ನನ್ನ ಚಿಕ್ಕಪ್ಪನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರಿಗೆ ಕುಡಿತದ ಚಟ ಇದ್ದುದ್ದರಿಂದ ಅವರಿಗೆ ಸರಿಯಾಗಿ ಮಾತನಾಡಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯಕ್ಕೆ ಬಂದರೆ ನಿಜಾಂಶ ತಿಳಿದು ಬರುತ್ತದೆ ಎಂದು ಉದ್ದೇಶ ಪೂರ್ವಕವಾಗಿಯೇ ನನ್ನ ಚಿಕ್ಕಪ್ಪ ಬಂದಿಲ್ಲ ಎಂದರೆ ಸರಿಯಲ್ಲ.

3. ದಾವಾ ಸ್ವತ್ತಿನ ಖಾತೆಯು ಈಗಲೂ ಸಹಾ ನನ್ನ ತಂದೆ ಮತ್ತು ಚಿಕ್ಕಪ್ಪ ರವರಿ ಹೆಸರಿನಲ್ಲಿ ಇದ್ದರೂ ಅದನ್ನು ಪ್ರತಿವಾದಿಯರು ಸುಮಾರು 40 ವರ್ಷಗಳಿಂದ ಯಾಕೆ ಉಳುಮೆ ಮಾಡುತ್ತಿದ್ದಾರೆ ಎಂಬ ವಿಚಾರ 5 ನೇ ವಾದಿಗೆ ಗೊತ್ತಿದೆ ಎಂದರೆ ಸರಿ. ಪ್ರತಿವಾದಿಯರ ಮತ್ತು ಅವರ ಕುಟುಂಬಸ್ಥರ ಪರಿಚಯ ನನಗೆ ಇದೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಪ್ರಧಾನ ಸಿವಿಲ್
ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ